# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಆದರ್ಶ್ .ಕೆ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್), ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇವರ ಸೇವೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಲೀನಗೊಳಿಸುವ ಬಗ್ಗೆ.

ಉಲ್ಲೇಖ:
1. ಟಿಪ್ಪಣಿ ಸಂಖ್ಯೆ: CM/60189/MIN(GOK)/19, ದಿನಾಂಕ: 23.10.2019.
2. ಅನಧಿಕೃತ ಟಿಪ್ಪಣಿ ಸಂಖ್ಯೆ: ಎನರ್ಜಿ/106/ಪಿಪಿಸಿ/2019, ದಿನಾಂಕ: 12.11.2019.
3. ಪತ್ರ ಸಂಖ್ಯೆ: ಎ/ಪಿ/ಬಿ-ಬಿ4/3467, ದಿನಾಂಕ: 13.12.2019.
4. ಪತ್ರ ಸಂಖ್ಯೆ: ಕ.ಕೈ.ಪ್ರ.ಮಂ/ಕೇಂ.ಕ/ಆಡಳಿತ/1147(7)/ 13263/19-20, ದಿನಾಂಕ: 18.12.2019.
5. ಟಿಪ್ಪಣಿ ಸಂಖ್ಯೆ: ಮುಮಂ/ಗೃಕ/277/2020, ದಿನಾಂಕ: 24.01.2020.
6. ಪತ್ರ ಸಂಖ್ಯೆ: ಕ.ಕೈ.ಪ್ರ.ಮಂ/ಕೇಂಕ/ಆಡಳಿತ/8166/2020-21, ದಿನಾಂಕ: 31.07.2020.
7. ಪತ್ರ ಸಂಖ್ಯೆ: ಎ1/ಪಿ1/ಎ/2615, ದಿನಾಂಕ: 25.11.2020.

ಪ್ರಸ್ತಾವನೆ:-

ಶ್ರೀ ಆದರ್ಶ್ ಕೆ, ಸಹಾಯಕ ಅಭಿಯಂತರರು (ಸಿವಿಲ್), ಅನ್ವೇಷಣಾ ವಿಭಾಗ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಿವನಸಮುದ್ರ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಮನವಿಯ ಮೇರೆಗೆ ಸದರಿಯವರ ಸೇವೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಲೀನಗೊಳಿಸಲು ಕ್ರಮವಹಿಸುವಂತೆ ಮೇಲೆ (1)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಆದೇಶಿಸಿದ್ದು, ಇವರ ಸೇವೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಲೀನಗೊಳಿಸುವ ವಿಷಯದಲ್ಲಿ ಅಭಿಪ್ರಾಯವನ್ನು ಸಲ್ಲಿಸುವಂತೆ ಮೇಲೆ (2)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ), ಇಂಧನ ಇಲಾಖೆ ಇವರು ಕೋರಿದ್ದಾರೆ.

ಶ್ರೀ ಆದರ್ಶ್ .ಕೆ ಇವರ ಸೇವೆಯನ್ನು ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ನಿಗಮದ ನಿಯಮಾವಳಿಯನ್ವಯ ಕೆ.ಐ.ಎ.ಡಿ.ಬಿ.ಯಲ್ಲಿ ವಿಲೀನಗೊಳಿಸಲು ನಿಗಮದ ಸಹಮತಿ ಇರುವುದಾಗಿ ಮೇಲೆ(3)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇವರು ತಿಳಿಸಿದ್ದಾರೆ.

ಶ್ರೀ ಆದರ್ಶ್ .ಕೆ, ಸಹಾಯಕ ಅಭಿಯಂತರರು (ಸಿವಿಲ್), ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಿವನಸಮುದ್ರ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಸೇವೆಯನ್ನು ಕೆ.ಐ.ಎ.ಡಿ.ಬಿ.ಯಲ್ಲಿ ವಿಲೀನಗೊಳಿಸುವ ಕುರಿತು ಮಂಡಳಿಯ ಅಭಿಪ್ರಾಯ ಕೋರಲಾಗಿ ಮಂಡಳಿಯ ವೃಂದ ಮತ್ತು ನೇಮಕಾತಿ

ನಿಯಮಾವಳಿಗಳನುಸಾರ ಮಂಡಳಿಯಲ್ಲಿ ಸರ್ಕಾರದ ನಿಗಮ/ ಮಂಡಳಿ/ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ನೌಕರರ ಸೇವೆಯನ್ನು ಮಂಡಳಿಯಲ್ಲಿ ವಿಲೀನಗೊಳಿಸಲು ಅವಕಾಶವಿಲ್ಲದೇ ಇರುವುದರಿಂದ, ಕೆ.ಐ.ಎ.ಡಿ. ಕಾಯ್ದೆ 1966ರ ಕಲಂ 40 ರಡಿ Special Absorption Rule ಅನ್ನು ಮಾಡಿ, ಅದರ ಅನುಸಾರ ಶ್ರೀ ಆದರ್ಶ್ ಕೆ., ಸಹಾಯಕ ಅಭಿಯಂತರರು (ಸಿವಿಲ್), ಮೆ|| ಕೆ.ಪಿ.ಸಿ.ಎಲ್. ಇವರ ಸೇವೆಯನ್ನು ಮಂಡಳಿಯಲ್ಲಿ ವಿಲೀನಗೊಳಿಸಬಹುದಾಗಿದೆ ಎಂದು ಅಭಿಪ್ರಾಯಿಸುತ್ತಾ, ಸದರಿಯವರ ಸೇವೆಯನ್ನು ಕೆ.ಐ.ಎ.ಡಿ.ಬಿ.ಯಲ್ಲಿ ವಿಲೀನಗೊಳಿಸುವ ಕುರಿತು ವಿಷಯವನ್ನು ಮಂಡಳಿ ಸಭೆಯ ಮುಂದೆ ಮಂಡಿಸಿ, ಸಭೆಯ ನಿರ್ಣಯದನ್ವಯ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರು ಅಭಿಪ್ರಾಯಿಸಿದ್ದಾರೆ.

ಈ ಮಧ್ಯೆ, ಶ್ರೀ ಆದರ್ಶ್ ಕೆ., ಸಹಾಯಕ ಅಭಿಯಂತರರು (ಸಿವಿಲ್) ಇವರಿಗೆ ಸಹಾಯಕ ಅಭಿಯಂತರರ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ದೊರೆತ್ತಿದ್ದು, ಇವರ ಸೇವೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರ (ಸಿವಿಲ್) ಹುದ್ದೆಯಲ್ಲಿ ವಿಲೀನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮೇಲೆ(5)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಯವರು ಕೋರಿರುತ್ತಾರೆ.

ಅದರಂತೆ, ಶ್ರೀ ಆದರ್ಶ್ ಕೆ., ಇವರ ಸೇವೆಯನ್ನು ಕೆ.ಐ.ಎ.ಡಿ.ಬಿ.ಯಲ್ಲಿ ವಿಲೀನಗೊಳಿಸುವ ವಿಷಯವನ್ನು ದಿನಾಂಕ: 17.02.2020ರಂದು ನಡೆದ 364ನೇ ಮಂಡಳಿ ಸಭೆಯಲ್ಲಿ ಚರ್ಚಿಸಿ, ಸರ್ಕಾರದ ಮಂಡಳಿ/ನಿಗಮಗಳ ಅಧಿಕಾರಿ/ನೌಕರರ ಸೇವೆಯನ್ನು ಮಂಡಳಿಯಲ್ಲಿ ತತ್ಸಮಾನ ಹುದ್ದೆಯಲ್ಲಿ ವಿಲೀನಗೊಳಿಸುವ ಕುರಿತು ದೀರ್ಘಾವಧಿ ನಿಯಮಾವಳಿಯನ್ನು ಅವಶ್ಯವಿದ್ದಲ್ಲಿ ರೂಪಿಸಿ, ಪ್ರಸ್ತಾವನೆಯನ್ನು ಪುನಃ ಮಂಡಳಿ ಸಭೆಗೆ ಮಂಡಿಸಲು ನಿರ್ಣಯಿಸಲಾಗಿದೆ.

ಈ ವಿಷಯವಾಗಿ ದಿನಾಂಕ: 19.06.2020ರಂದು ನಡೆದ ಮಂಡಳಿಯ 365ನೇ ಸಭೆಯಲ್ಲಿ ಚರ್ಚಿಸಿ, ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅನುಸಾರ, ಸರ್ಕಾರದ ನಿಗಮ/ ಮಂಡಳಿ/ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ನೌಕರರ ಸೇವೆಯನ್ನು ಮಂಡಳಿಯಲ್ಲಿ ವಿಲೀನಗೊಳಿಸಲು ಅವಕಾಶವಿಲ್ಲದೇ ಇರುವುದರಿಂದ ಹಾಗೂ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16(ಎ)ii ರನ್ವಯ ಸರ್ಕಾರದ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಸರ್ಕಾರಿ ನೌಕರರನ್ನು ಖಾಯಂ ಆಗಿ ವರ್ಗಾವಣೆ ಮೂಲಕ ನೇಮಕಾತಿ ಮಾಡಲು ಅವಕಾಶವಿದ್ದು, ಅದರಂತೆ ಶ್ರೀ ಆದರ್ಶ್ ಕೆ., ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್), ಮೆ|| ಕೆ.ಪಿ.ಸಿ.ಎಲ್., ಇವರ ಸೇವೆಯನ್ನು ಮಂಡಳಿಯ ಸೇವೆಯಲ್ಲಿ ವಿಲೀನಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ಣಯಿಸಲಾಗಿದೆ. ಅಂತೆಯೇ, ಶ್ರೀ ಆದರ್ಶ್ ಕೆ., ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್),

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರ ಸೇವೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಲೀನಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಮೇಲೆ(6)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರು ಸಲ್ಲಿಸಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಯಾವುದೇ ಸರ್ಕಾರದ ನಿಗಮ/ ಮಂಡಳಿ/ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಅಧಿಕಾರಿ/ ನೌಕರರ ಸೇವೆಯನ್ನು ವಿಲೀನಗೊಳಿಸಲು ಅವಕಾಶವಿರುವುದಿಲ್ಲ. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಾಮಾನ್ಯ ನೇಮಕಾತಿ) 1977ರ ನಿಯಮ 16(ಎ)iiರಲ್ಲಿ "an officer holding a post of an equivalent grade by transfer or by deputation from any other service of the state for recruitment to which these rules apply" ಎಂದು ಉಲ್ಲೇಖಿಸಲಾಗಿದ್ದು, ಸದರಿ ನಿಯಮದನ್ವಯ ಯಾವುದೇ ಅಧಿಕಾರಿ / ನೌಕರರನ್ನು ಅವರ ತತ್ಸಮಾನ ಹುದ್ದೆಗೆ ವರ್ಗಾವಣೆ ಅಥವಾ ನಿಯೋಜನೆ ಮೇಲೆ ನೇಮಕಾತಿ ಮಾಡಲು ಅವಕಾಶವಿದ್ದು, ವಿಲೀನಗೊಳಿಸುವ ಅವಕಾಶವಿರುವುದಿಲ್ಲ. ಆದ್ದರಿಂದ, ಈ ಪ್ರಸ್ತಾವನೆಯ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)ಯ ಅಭಿಪ್ರಾಯ ಕೋರಲಾಗಿ, ಪ್ರಸ್ತಾವನೆಯು ನಿಗಮದಿಂದ ಮಂಡಳಿಗೆ ಶಾಶ್ವತ ವರ್ಗಾವಣೆ ಕೋರುತ್ತಿರುವುದಾಗಿದ್ದು, ಪ್ರಸ್ತಾವನೆ ಕುರಿತಂತೆ ಆಡಳಿತ ಇಲಾಖೆಗಳೇ ಪ್ರಕರಣದ ವಾಸ್ತವಾಂಶಗಳನ್ನು ಪರಿಶೀಲಿಸಿ, ಸೇವಾ ಅಗತ್ಯತೆಯನ್ನು ಪರಿಗಣಿಸಿ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಅಭಿಪ್ರಾಯಿಸಿರುತ್ತದೆ.

ಶ್ರೀ ಆದರ್ಶ್ .ಕೆ ಇವರನ್ನು ಕೆ.ಐ.ಎ.ಡಿ.ಬಿ.ಯಲ್ಲಿ ವಿಲೀನಗೊಳಿಸುವ ಸಲುವಾಗಿ ಇವರನ್ನು ಸೇವೆಯಿಂದ ಬಿಡುಗಡೆಗೊಳಿಸಿ, ಸದರಿ ಅಧಿಕಾರಿಯ ಸೇವೆಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ವಶಕ್ಕೆ ನೀಡಿ ಮೇಲೆ(7)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇವರು ಆದೇಶಿಸಿದ್ದಾರೆ.

ಅಂತೆಯೇ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಾಮಾನ್ಯ ನೇಮಕಾತಿ) 1977ರ ನಿಯಮ 16(ಎ)ii ರನ್ವಯ ಶ್ರೀ ಆದರ್ಶ್ ಕೆ., ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್) ಇವರ ಸೇವೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸೇವೆಯಲ್ಲಿ ವಿಲೀನಗೊಳಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಐ 143 ಎಸ್‌ಪಿಕ್ಯೂ (ಇ) 2019,</u>**
**<u>ಬೆಂಗಳೂರು ದಿನಾಂಕ: 15.12.2020.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ಆದರ್ಶ್ ಕೆ., ಸಹಾಯಕ

ಕಾರ್ಯಪಾಲಕ ಅಭಿಯಂತರ (ಸಿವಿಲ್), ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇವರ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಾಮಾನ್ಯ ನೇಮಕಾತಿ) 1977ರ ನಿಯಮ 16(ಎ)ii ರನ್ವಯ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್) ವೃಂದದ ವೇತನ ಶ್ರೇಣಿ ರೂ.52650-97100ರ ಹುದ್ದೆಯಲ್ಲಿ ಖಾಯಂ ಆಗಿ ವರ್ಗಾವಣೆ ಮೂಲಕ ನೇಮಕಗೊಳಿಸಿ, ಇವರನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ.

1) ಸದರಿ ಅಧಿಕಾರಿಯು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್) ಹುದ್ದೆಗೆ ನೇಮಕಾತಿ ಹೊಂದಿದ ಎರಡು ವರ್ಷಗಳ ಒಳಗಾಗಿ ಸದರಿ ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದತಕ್ಕದ್ದು. ಸದರಿಯವರು ಈ ಅವಧಿಯಲ್ಲಿ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದಿದ್ದಲ್ಲಿ ಅವರ ಸೇವೆಯನ್ನು ಮಾತೃ ಇಲಾಖೆಯಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಹಿಂದಿರುಗಿಸಲಾಗುವುದು.

2) ಖಾಯಂ ಆಗಿ ವರ್ಗಾವಣೆ ಹೊಂದಿರುವ ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್) ವೃಂದದಲ್ಲಿ ಸದರಿಯವರ ಜ್ಯೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ ಜ್ಯೇಷ್ಠತಾ ನಿಯಮಾವಳಿಗಳು 1957ರ ನಿಯಮ 6ರ ಮೊದಲನೆಯ ಪರಂತುಕದನ್ವಯ ಸದರಿಯವರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸೇವೆಗೆ ಸೇರಿದ ದಿನಾಂಕದಿಂದ ಪರಿಗಣಿಸತಕ್ಕದ್ದು.

3) ಅಧಿಕಾರಿಯ ವಿಲೀನಾತಿ / ಶಾಶ್ವತ ವರ್ಗಾವಣೆಯು ಅಧಿಕಾರಿಯ ಸೇವಾ ಅವಧಿಯಲ್ಲಿ ಒಂದು ಬಾರಿಗೆ ಮಾತ್ರ ಅನ್ವಯಿಸುತ್ತದೆ.

4) ಸದರಿಯವರ ಖಾಯಂ ವರ್ಗಾವಣೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್) ವೃಂದದಲ್ಲಿ ನೇರ ನೇಮಕಾತಿಗೆ ಕಾಯ್ದಿರಿಸಿರುವ ರಿಕ್ತ ಸ್ಥಾನದ ವಿರುದ್ಧ ಪರಿಗಣಿಸತಕ್ಕದ್ದು.

5) ಶ್ರೀ ಆದರ್ಶ್ ಕೆ. ಇವರು ವರ್ಗಾವಣೆ ಭತ್ಯೆಗೆ ಅರ್ಹರಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

PR-468